ನೋಂದಣಿ ಸಂಖ್ಯೆ Registration No:											

26E202

ವಿಷಯ ಸಂಕೇತ
Subject Code **16**

ಐಚ್ಛಿಕ ಕನ್ನಡ / OPTIONAL KANNADA

ಸಮಯ: 3 ಗಂಟೆ 00 ನಿಮಿಷಗಳು **(ಒಟ್ಟು ಪ್ರಶ್ನೆಗಳ ಸಂಖ್ಯೆ : 48)** **ಗರಿಷ್ಠ ಅಂಕಗಳು: 80**
Time : 3 Hours 00 Minutes] **[Total No. of Questions : 48]** **[Max. Marks : 80**

ಸೂಚನೆಗಳು :

1. **ವಿಭಾಗ 'ಅ'** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.
2. ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.
3. ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸುವುದು.

ಅ–ವಿಭಾಗ

I. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. **(5 × 1 = 5)**

1) ನಾರೀ ರೂಪದ ಯಂತ್ರವನ್ನು ಸೃಷ್ಟಿಸಿದವನು.

(ಅ) ಆದಿದೇವ

(ಆ) ಇಂದ್ರ

(ಇ) ನಾಭಿರಾಜ

(ಈ) ಮಹಾಕಚ್ಛ

2) ಅರ್ಜುನನ ವಿರುದ್ಧ ಇವರು ಹೋರಾಡಲಾರರು

(ಅ) ರಾಜರು

(ಆ) ಬೇಡರು

(ಇ) ದೇವಾಸುರರು

(ಈ) ಮನುಷ್ಯರು

3) ನಾಗಿಯ ಜಡೆಯು ಹೀಗಿತ್ತು.

(ಅ) ಹಾವಿನಂತ ಜಡೆ

(ಆ) ಉದ್ದನೆಯ ಜಡೆ

(ಇ) ಹೂವಿನಂತ ಜಡೆ

(ಈ) ತುಂಡು ಜಡೆ

4) ರೈತನು ಶಿವನನ್ನು ನೋಡಲು ಇಲ್ಲಿಗೆ ಹೊರಟಿದ್ದಾನೆ.

(ಅ) ಕಾಡಿಗೆ

(ಆ) ಮನೆಗೆ

(ಇ) ಹೊಲಕ್ಕೆ

(ಈ) ಜಾತ್ರೆಗೆ

5) ಜಲಗಾರನಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?

(ಅ) ಜಲಗಾರ ಪ್ರಕೃತಿ ಪ್ರೇಮಿ

(ಆ) ಜಲಗಾರನಿಗೆ ಕಾಯಕವೇ ಕೈಲಾಸ

(ಇ) ಜಲಗಾರನ ಶಿವನು ಗುಡಿಯಲ್ಲಿದ್ದಾನೆ

(ಈ) ಜಲಗಾರ ದೀನ ದುರ್ಬಲರ ಸೇವೆ ಮಾಡುತ್ತಾನೆ

II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ. **(5 × 1 = 5)**

6) ಕನಕ ಪದದ ಅರ್ಥ _____

7) ಯೌವ್ವನ ಪದದ ತದ್ಭವ ರೂಪ _____

8) ಆಧಾರ ಪದದ ವಿರುದ್ಧಾರ್ಥಕ ಪದ _____

9) ದ್ವಿರುಕ್ತಿಗೆ ಇದು ಉದಾಹರಣೆ _____

10) ಶಬರೇಂದ್ರ ಪದದ ಬಿಡಿಸಿ ಬರೆದ ರೂಪ _____

[ನಿರಾಧಾರ, ನಲಿನಲಿ, ಬಂಗಾರ, ಜವ್ವನ, ಪುಷ್ಪ, ಶಬರ+ಇಂದ್ರ]

III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ. **(5 × 1 = 5)**

11) ಅ) ಸೌದಾಮಿನಿ – ನಿಧಾನ

ಆ) ಭೂಮಿ – ಅಕ್ಷಿ, ನೇತ್ರ

ಇ) ಸಿರಿ – ಮಿಂಚು

ಈ) ಸಮಾಧಾನ – ಇಳೆ, ಪೃಥ್ವಿ

ಉ) ಕಣ್ಣು – ಶ್ರೀ

– ಅಸಮಾಧಾನ

IV. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **(5 × 1 = 5)**

12) ಶಿವನನ್ನು ಆಡಿಸಿದ ಭಕ್ತ ಯಾರು?

13) ಕಿಂಕರ ಚಕೋರ ಸುಧಾಕರ ಯಾರು?

14) ಕುಲಕೋಟಿಯನ್ನು ಉದ್ಧರಿಸುವವಳು ಯಾರು?

15) ಮಣ್ಣಿನ ಭೋಗಿ ಯಾರು?

16) ಶಿವನು ಯಾರ ಬಂಧು ಎನ್ನುತ್ತಾನೆ?

ಆ–ವಿಭಾಗ

V. ಕೆಳಗಿನ ಪ್ರಶ್ನೆಗಳಲ್ಲಿ **ನಾಲ್ಕಕ್ಕೆ, ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(4 × 2 = 8)**

17) ಅಸಮ ಪ್ರೇಕ್ಷಕರು ಯಾರು?

18) ಅರ್ಜುನನಿಗೆ ಅಪಜಯವಾಗಲು ಕಾರಣವೇನು?

19) ಶಿವನ ನಾಟ್ಯಗತಿಗೆ ಬ್ರಹ್ಮನ ಶಿರ ಹಾಗೂ ಸುರರ ಶಿರೋಮಾಲೆಗಳಿಗೆ ಏನಾಯಿತು?

20) ಆನೆ ಹಾಗೂ ಕುರಿಗಳು ಕಬ್ಬನ್ನು ಮೆಲುವ ಪರಿ ಹೇಗೆ?

21) ಕುವರ ಮತ್ತು ಕುವರಿಯರ ಬಗ್ಗೆ ಸಂಚಿಯ ಹೊನ್ನಮ್ಮನ ಅಭಿಪ್ರಾಯವೇನು?

VI. ಕೆಳಗಿನ **ನಾಲ್ಕು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4 × 3 = 12)**

22) ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್

23) ಮುಕ್ಕಣ್ಣ ಮರುಗಿ ಮನದೆ ಸಿಡಿಮಿಡಿಗೊಂಡಂ

24) ಗಣಪದಮಂ ಗುಂಡಯ್ಯಂಗೀವುತೆ

25) ಕೊಲ್ವುದು ಧರ್ಮವೆ ಕಳುವುದು ನೀತಿಯೆ

26) ಲೋಭದಿಂ ಕೌರವನು ಲಾಭವನು ಪಡೆದಿಹನೆ

VII. ಕೆಳಗಿನ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2 × 4 = 8)**

27) ಅರ್ಜುನನು ಶಿವನನ್ನು ಪೂಜಿಸಿದ ಬಗೆ ಹೇಗೆ? ಅದರ ಪರಿಣಾಮವೇನು?

28) ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ? ವಿವರಿಸಿ.

29) ಸರ್ವಜ್ಞನ ತ್ರಿಪದಿಗಳಲ್ಲಿ ತೋರುವ ಲೋಕನೀತಿಯನ್ನು ವಿವರಿಸಿ.

30) ನೇಮದೊಳು ನೆಲಸುವುದು ಪದ್ಯದ ಹಿನ್ನೆಲೆಯಲ್ಲಿ ಹೆಣ್ಣಿನ ಹಿರಿಮೆಯನ್ನು ವರ್ಣಿಸಿ.

VIII. ಕೆಳಗಿನ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ವಿವರಿಸಿ. **(1 × 4 = 4)**

31) ರಸಭಾವಾಭಿನಯಂಗಳ್

ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ

ಪೊಸವೆ ಕರಣಂಗಳುಂ ನಿ

ಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ

32) ತರುಣಿಗೆ ಪತಿದೈವ ವಿದ್ಯಾರ್ಥಿಗೆಣ್ಣಿಸೆ

ಗುರುದೈವ ಸೇವಕ ಜನಕೆ

ಧರಣೇಶ ದೈವ ಧರೆಯ ಜನರೆಲ್ಲರ್ಗೆ

ಸಿರಿರಂಗ ನೀನಧಿದೈವ

ಇ-ವಿಭಾಗ

IX. ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ, ಎರಡು-ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(1 × 2 = 2)**

33) ಸೀರೆಯವನು ಯಾವ ಯಾವ ಬಣ್ಣದ ಸೀರೆಗಳನ್ನು ತಂದಿದ್ದನು?

34) ನಾಗಿಯು ಬಳುಕಿ ಬಂದಾಗ ಕರು ಮತ್ತು ಹಸುಗಳ ಪ್ರತಿಕ್ರಿಯೆಗಳೇನು?

X. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

35) ನಾಗಿಯ ಕಥೆ ಕವನದಲ್ಲಿ ನಾಗಿಯ ಸೌಂದರ್ಯವನ್ನು ಕವಿ ಹೇಗೆ ವರ್ಣಿಸಿದ್ದಾನೆ?

36) ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ವಿವರಿಸಿ.

ಈ-ವಿಭಾಗ

XI. ಕೆಳಗಿನ **ಎರಡು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

37) ರೈತನ ಗೆಳೆಯರು ಯಾರು?

38) ಮೂಡಣ ಮತ್ತು ಪಡುವಣದಲ್ಲಿ ಯಾರ್ಯಾರಿದ್ದಾರೆ?

39) ಊರ ತೋಟಿ ಮತ್ತು ಜಗದ ತೋಟಿ ಯಾರು?

XII. ಕೆಳಗಿನವುಗಳಲ್ಲಿ **ಎರಡು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

40) ಗುಡಿಗಳು ಪಾಪಿಗಳ ಭೋಗಿಗಳ ಗೂಡುಗಳು

41) ದೂರದಲ್ಲಿಯೇ ನಿಂತು ಕೈಮುಗಿದು ಬಾ

42) ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ

XIII. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

43) ಶಿವನ ಆಭರಣಗಳು ಯಾವುವು? ವಿವರವಾಗಿ ಬರೆಯಿರಿ.

44) ಕಾಯಕದ ಮಹತ್ವವನ್ನು ಜಲಗಾರನು ರೈತನಿಗೆ ಹೇಳಿದ ಬಗೆಯನ್ನು ವಿವರಿಸಿ.

ಉ-ವಿಭಾಗ

XIV. ಕೆಳಗಿನ **ಒಂದು** ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **(1 × 4 = 4)**

45) ಅಂಬರಭೂಷಣಮಾಲಾ

ಡಂಬರದ ಬೆಡಂಗನಮರನರ್ತಕಿ ಗಡಮೇ

ನೆಂಬುದೊ ಧರಣೇಂದ್ರಂಗಮ

ಳುಂಬಂ ಪೊಗಟಲ್ಕೆ ರೂಪು ನೀಳಾಂಜನೆಯಾ

46) ಶಿವನಂ ಕಂಡಾ ಭಕ್ತಂ ಕುಣಿಯಲು

ಶಿವಭಕ್ತನ ಕೂಡಭವಂ ಕುಣಿಯಲು

XV. ಕೆಳಗಿನವುಗಳಲ್ಲಿ **ಒಂದಕ್ಕೆ** ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ. **(1 × 4 = 4)**

47) ಬಲ್ಲವನೇ ಬಲ್ಲ ಬೆಲ್ಲದ ರುಚಿಯ

48) ಅರ್ಜುನನ ಅಹಂಕಾರ ಮಂಜಿನಂತೆ ಕರಗಿತು.

———————